Phone: 080 - 22945105
Fax: 22945105

# BANGALORE WATER SUPPLY AND SEWERAGE BOARD
# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ

ಸ°ಂ: ಬೆಂ.ಜ.ಮಂ/ಅ/ಪ್ರ.ಅ/ 16165 /2015-16 ದಿನಾಂಕ: 03\03\2016

## ಸುತ್ತೋಲೆ – 1

ವಿಷಯ: ಬೆಂಗಳೂರು ನೀರು ಸರಬರಾಜು ವಿನಿಯಮಗಳು, 1965 –ವಿನಿಯಮ 5ಕ್ಕೆ ತಿದ್ದುಪಡಿ

ಉಲ್ಲೇಖ: 1. ಕರಡು ಅಧಿಸೂಚನೆ ಸಂ:ಬೆಂಜಮಂ/ಅ/ಮುಆಅಕಾ/3526/2015-16, ಬೆಂಗಳೂರು ದಿನಾಂಕ: 13.01.2016
2. ಅಂತಿಮ ಅಧಿಸೂಚನೆ ಸಂ:ಬೆಂಜಮಂ/ಅ/ಮುಆಅಕಾ/4137/2015-16, ಬೆಂಗಳೂರು ದಿನಾಂಕ: 25.02.2016 (ಪ್ರಕಟಿಸಿದ ದಿನಾಂಕ: 26.02.2016)

*****

ಜಲಮಂಡಳಿ ವ್ಯಾಪ್ತಿಯಲ್ಲಿ ಬರುವಂತಹ ಎಲ್ಲಾ ಬಹುಮಹಡಿ ವಸತಿ ಗೃಹಸಮುಚ್ಛಯ ಕಟ್ಟಡಗಳು, ವಾಣಿಜ್ಯ ಕಟ್ಟಡಗಳು / ಸಂಕೀರ್ಣಗಳು ಮತ್ತು ವಸತಿ ಗೃಹಗಳಿಗೆ ನೀರು ಮತ್ತು ಒಳಚರಂಡಿ ಸಂಪರ್ಕವನ್ನು ಮಂಜೂರು ಮಾಡುವ ಸಲುವಾಗಿ "ಪರಿಷ್ಕೃತ ದಾಮಾಷ ಶುಲ್ಕ" ವಿಧಿಸಲು ಬೆಂಗಳೂರು ನೀರು ಸರಬರಾಜು ವಿನಿಯಮಗಳು, 5.3 ಮತ್ತು ಒಳಚರಂಡಿ ವಿನಿಯಮಗಳು 2(ಡಿ)ಗೆ ಈ ಕೆಳಕಂಡಂತೆ ತಿದ್ದುಪಡಿಯಾಗಿರುತ್ತದೆ.

| ಕ್ರ.ಸಂ. | ಕಟ್ಟಡಗಳ ವಿವರ | ಪರಿಷ್ಕೃತ ದಾಮಾಷ ಶುಲ್ಕ ದರಗಳ ವಿವರ (ಒಟ್ಟು ಕಟ್ಟಡದ ನಿರ್ಮಾಣ ಪ್ರದೇಶಕ್ಕೆ) |
|---|---|---|
| 1. | ವಸತಿ ಗೃಹ | ರೂ.250/- ಪ್ರತಿ ಚದರ ಮೀಟರ್ |
| 2. | ಬಹುಮಹಡಿ ವಸತಿ ಗೃಹಸಮುಚ್ಛಯ ಕಟ್ಟಡಗಳು, ವಾಣಿಜ್ಯ ಕಟ್ಟಡಗಳು / ಸಂಕೀರ್ಣಗಳು, ವಿಲಾಸಿ ಬಂಗಲೆಗಳು, ವಿಲ್ಲಾ, | ರೂ.400/- ಪ್ರತಿ ಚದರ ಮೀಟರ್ |
| 3. | ಎಲ್ಲಾ ವಿಧದ ಗೃಹೇತರ / ವಾಣಿಜ್ಯ ಕಟ್ಟಡಗಳು | ರೂ.600/- ಪ್ರತಿ ಚದರ ಮೀಟರ್ |

ಮಂಡಳಿಯ ನಿರ್ವಹಣಾ ವಲಯದ ಎಲ್ಲಾ ಕಾರ್ಯನಿರ್ವಾಹಕ ಅಭಿಯಂತರರು ಮತ್ತು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ನೀರು ಮತ್ತು ಒಳಚರಂಡಿ ಸಂಪರ್ಕಗಳನ್ನು ಮಂಜೂರು ಮಾಡುವ ಮುನ್ನ "ಪರಿಷ್ಕೃತ ದಾಮಾಷ ಶುಲ್ಕ"ವನ್ನು ಈ ಕೆಳಕಂಡ ಷರತ್ತುಗಳೊಂದಿಗೆ ವಿಧಿಸತಕ್ಕದ್ದು.

| ಕ್ರ.ಸಂ. | ಷರತ್ತುಗಳು |
|---|---|
| 1. | ಪರಿಷ್ಕೃತ ದಾಮಾಷ ಶುಲ್ಕ ದರಗಳು ದಿನಾಂಕ: 26.02.2016ರಿಂದ ಜಾರಿಗೊಳಿಸಲಾಗಿದೆ. |
| 2. | ದಿನಾಂಕ: 26.02.2016 ರಿಂದ ಸ್ವೀಕೃತವಾದ ನೀರು ಮತ್ತು ಒಳಚರಂಡಿ ಸಂಪರ್ಕಗಳ ಕಡತಗಳಿಗೆ ಪರಿಷ್ಕೃತ ದಾಮಾಷ ಶುಲ್ಕ ದರಗಳನ್ನು ಕಡ್ಡಾಯವಾಗಿ ವಿಧಿಸತಕ್ಕದ್ದು. |

| | |
|---|---|
| 3. | ಈಗಾಗಲೇ ಸ್ವೀಕೃತಗೊಂಡಿರುವ ನೀರು ಮತ್ತು ಒಳಚರಂಡಿ ಸಂಪರ್ಕಗಳ ಕಡತಗಳು ಕೇಂದ್ರ ಕಚೇರಿಯಲ್ಲಿ / ವಿಭಾಗದಲ್ಲಿ / ಉಪವಿಭಾಗದಲ್ಲಿ, ಯಾವುದೇ ಹಂತದ ಪ್ರಕ್ರಿಯೆಯಲ್ಲಿರುವ ಕಡತಗಳಿಗೆ ಹಾಲಿಯಿರುವ ದಾಮಾಷ ಶುಲ್ಕ ದರಗಳಲ್ಲಿ ಪಾವತಿಸಿಕೊಂಡು, ಮಂಜೂರು ಮಾಡಲು ಕೊನೆಯ ದಿನಾಂಕ: 24.03.2016 ಆಗಿರುತ್ತದೆ. ನಂತರ ದಿನಾಂಕದಿಂದ ಪರಿಷ್ಕೃತ ದಾಮಾಷ ಶುಲ್ಕ ದರಗಳನ್ನು ಕಡ್ಡಾಯವಾಗಿ ವಿಧಿಸಲಾಗುವುದು. |
| 4. | ಈಗಾಗಲೇ ನೀಡಿರುವ ಬೇಡಿಕೆ ಪತ್ರಗಳಿಗೆ, ಬೇಡಿಕೆ ಪತ್ರ ನೀಡಿರುವ ದಿನಾಂಕದಿಂದ 30 ದಿನಗಳ ಅವಧಿಯವರೆಗೆ ಹಾಲಿಯಿರುವ ದಾಮಾಷ ಶುಲ್ಕ ದರಗಳಲ್ಲಿ ಪಾವತಿಸಲು ಅವಕಾಶ ನೀಡಲಾಗಿರುತ್ತದೆ. ಸಂಬಂಧಿಸಿದ ಅರ್ಜಿದಾರರು ನಿಗದಿತ ಗಡುವಿನೊಳಗೆ ಶುಲ್ಕಪಾವತಿ ಮಾಡದಿದ್ದಲ್ಲಿ, ನಂತರ ದಿನಾಂಕದಿಂದ ಪರಿಷ್ಕೃತ ದಾಮಾಷ ಶುಲ್ಕ ದರಗಳನ್ನು ಕಡ್ಡಾಯವಾಗಿ ವಿಧಿಸಲಾಗುವುದು.<br><br>ಇದಲ್ಲದೆ, 30 ದಿನ ನೀಡಿದ ಕಾಲಾವಕಾಶದಲ್ಲಿ ಪಾವತಿಸದಿದ್ದಲ್ಲಿ, ಅಂತಹ ಪ್ರಕರಣಗಳಿಗೆ ಪರಿಷ್ಕೃತ ದಾಮಾಷ ಶುಲ್ಕ ಮೊತ್ತಕ್ಕೆ ಶೇ.12 ರಷ್ಟು ಪ್ರತಿ ವರ್ಷ ಬಡ್ಡಿಯನ್ನು ವಿಧಿಸತಕ್ಕದ್ದು. |
| 5. | ಈಗಾಗಲೇ ನೀಡಿರುವ ಬೇಡಿಕೆ ಪತ್ರಗಳಿಗೆ, 30 ದಿನಗಳ ಕಾಲಾವಧಿ ಮುಕ್ತಾಯವಾಗಿದ್ದಲ್ಲಿ, ದಿನಾಂಕ: 1.03.2016 ರಿಂದ ಪರಿಷ್ಕೃತ ದಾಮಾಷ ಶುಲ್ಕ ದರಗಳನ್ನು ಕಡ್ಡಾಯವಾಗಿ ವಿಧಿಸಲಾಗುವುದು.<br><br>ಇದಲ್ಲದೆ, 30 ದಿನ ನೀಡಿದ ಕಾಲಾವಕಾಶದಲ್ಲಿ ಪಾವತಿಸದಿದ್ದಲ್ಲಿ, ಅಂತಹ ಪ್ರಕರಣಗಳಿಗೆ ದಿನಾಂಕ 1.03.2016ರಿಂದ ಪರಿಷ್ಕೃತ ದಾಮಾಷ ಶುಲ್ಕ ಮೊತ್ತಕ್ಕೆ ಶೇ.12 ರಷ್ಟು ಪ್ರತಿ ವರ್ಷ ಬಡ್ಡಿಯನ್ನು ವಿಧಿಸತಕ್ಕದ್ದು. |
| 6. | **ಅನಧಿಕೃತ ನೀರು ಮತ್ತು ಒಳಚರಂಡಿ ಸಂಪರ್ಕಗಳ ಪ್ರಕರಣಗಳಿಗೆ**, ಈಗಾಗಲೇ ನೀಡಿರುವ ಬೇಡಿಕೆ ಪತ್ರಗಳಿಗೆ, 30 ದಿನಗಳ ಕಾಲಾವಧಿ ಮುಕ್ತಾಯವಾಗಿದ್ದಲ್ಲಿ, ದಿನಾಂಕ 1.03.2016ದಿಂದ ಪರಿಷ್ಕೃತ ದಾಮಾಷ ಶುಲ್ಕ ದರಗಳನ್ನು ಕಡ್ಡಾಯವಾಗಿ ವಿಧಿಸಲಾಗುವುದು.<br><br>ಇದಲ್ಲದೆ, ದಾಮಾಷ ಶುಲ್ಕ ಪಾವತಿಸಲು ವಿಳಂಬವಾದಲ್ಲಿ, ಅಂತಹ ಪ್ರಕರಣಗಳಿಗೆ ದಿನಾಂಕ 1.03.2016ರಿಂದ ಪರಿಷ್ಕೃತ ದಾಮಾಷ ಶುಲ್ಕ ಮೊತ್ತಕ್ಕೆ ಶೇ.12 ರಷ್ಟು ಪ್ರತಿ ವರ್ಷ ಬಡ್ಡಿಯನ್ನು ವಿಧಿಸತಕ್ಕದ್ದು ಮತ್ತು **"ವಿನಿಯಮ ೫೫ಎ ಪ್ರಕಾರ"** ದಾಮಾಷ ಶುಲ್ಕದ ಮೇಲೆ ದಂಡವನ್ನು ವಿಧಿಸಲಾಗುವುದು. |
| 7. | ಹಾಲಿಯಿರುವ ದರದಲ್ಲಿ ಪೂರ್ಣ ದಾಮಾಷ ಶುಲ್ಕವನ್ನು ದಿನಾಂಕ: 26.02.2016ರೊಳಗೆ ಅಥವಾ ಬೇಡಿಕೆ ಪತ್ರ ನೀಡಿದ 30 ದಿನಗಳೊಳಗೆ ಪಾವತಿಸಿದ್ದು, ಆದರೆ ಫಲಾನುಭವಿ ವಂತಿಗೆ ಶುಲ್ಕ, ಬಡ್ಡಿ, ಕೊಳವೆ ಮಾರ್ಗಗಳ ಅಂದಾಜು ಪಟ್ಟಿ ಮೊತ್ತ ಪಾವತಿಸದಿದ್ದಲ್ಲಿ, ಅಂತಹ ಪ್ರಕರಣಗಳಿಗೆ ಪರಿಷ್ಕೃತ ದಾಮಾಷ ದರಗಳು ಅನ್ವಯಿಸುವುದಿಲ್ಲ. |

| | |
|---|---|
| 8. | ಹಾಲಿಯಿರುವ ದರದಲ್ಲಿ ಕನಿಷ್ಠ ಶೇ.50% ರಷ್ಟು ದಾಮಾಷ ಶುಲ್ಕವನ್ನು ದಿನಾಂಕ: 26.02.2016 ರೊಳಗೆ ಅಥವಾ ನೀಡಿದ 30 ದಿನಗಳೊಳಗೆ ಪಾವತಿಸಿದ್ದು, ಬಾಕಿ ಮೊತ್ತವನ್ನು ಪಾವತಿಸಲು ದಿನಾಂಕ: 24.03.2016ರವರೆಗೆ ಕಾಲಾವಕಾಶ ನೀಡಲಾಗಿರುತ್ತದೆ. ಅರ್ಜಿದಾರರು ನಿಗದಿಪಡಿಸಿರುವ ದಿನಾಂಕದೊಳಗೆ ಬಾಕಿ ಮೊತ್ತವನ್ನು ಪಾವತಸಿದೇ ಇದ್ದಲ್ಲಿ, ಪರಿಷ್ಕೃತ ದಾಮಾಷ ಶುಲ್ಕ ದರದಲ್ಲಿ ವಿಧಿಸತಕ್ಕದ್ದು, **ಈ ಪರಿಷ್ಕೃತ ಮೊತ್ತದಲ್ಲಿ ಈಗಾಗಲೇ ಪಾವತಿಸಿದ ಮೊತ್ತವನ್ನು ಕಳೆದು ಉಳಿದ ಮೊತ್ತವನ್ನು ವಸೂಲಿ ಮಾಡತಕ್ಕದ್ದು.**<br><br>ಇದಲ್ಲದೆ, ಪರಿಷ್ಕೃತ ದರದಲ್ಲಿ ಬಾಕಿ ಮೊತ್ತವನ್ನು ನಿಗದಿತ ದಿನದೊಳಗೆ ವಿಫಲವಾದಲ್ಲಿ ಬಾಕಿ ಮೊತ್ತಕ್ಕೆ ಶೇ.12 ರಷ್ಟು ಪ್ರತಿ ವರ್ಷ ಬಡ್ಡಿಯನ್ನು ವಿಧಿಸತಕ್ಕದ್ದು. |

ಮಂಡಳಿಯ ಆರ್ಥಿಕ ಹಿತದೃಷ್ಟಿಯಿಂದ, ಸದರಿ ವಿಷಯದಲ್ಲಿ ಯಾವುದೇ ಅಧಿಕಾರಿ ಅಥವಾ ನೌಕರರ ಲೋಪದೋಷ ಕಂಡುಬಂದಲ್ಲಿ, ಮಂಡಳಿಯ ನಿಯಮಗಳ ಪ್ರಕಾರ ಅವರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು
**ಬೆಂಗಳೂರು ಜಲಮಂಡಳಿ**

**ಪ್ರತಿಯನ್ನು:**

1. ಪ್ರಧಾನ ಮುಖ್ಯ ಅಭಿಯಂತರರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಮುಖ್ಯ ಅಭಿಯಂತರರು (ನಿ) ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
3. ಮು.ಆ.ಅ-ಕಾ ಮತ್ತು ಆ.ಸ ಮತ್ತು ಮು.ಲೆ.ಅ. ರವರ ಮಾಹಿತಿಗಾಗಿ.
4. ಅಮುಅ(ನಿ)-1, ಅಮುಅ(ನಿ)-2, ಅಮುಅ(ನಿ)-3, ಅಮುಅ(ಕಂದಾಯ) ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
5. ಕಾನಿಅ(ಆರ್.ಬಿ.ಸಿ) ಮತ್ತು ನಿರ್ವಹಣಾ ವಲಯದ ಎಲ್ಲಾ ಕಾನಿಅ ಮತ್ತು ಸಕಾನಿಅ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
6. ಸಾ.ಸಂ.ಅ, ಕಾನೂನು ಅಧಿಕಾರಿ, ಸ.ನಿ(ಲೆಕ್ಕಗಳು) ರವರ ಮಾಹಿತಿಗಾಗಿ.

Phone: 080 - 22945105
Fax: 22945105

# BANGALORE WATER SUPPLY AND SEWERAGE BOARD
# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ

ಸಂ: ಬೆಂ.ಜ.ಮಂ/ಅ/ಪ್ರ.ಅ/ಮುಅ(ನಿ)/ 16199 /2015-16 ದಿನಾಂಕ: 4/3/2016

## ತಿದ್ದೋಲೆ

ವಿಷಯ: ಬೆಂಗಳೂರು ನೀರು ಸರಬರಾಜು ವಿನಿಯಮಗಳು, 1965 –ವಿನಿಯಮ 5ಕ್ಕೆ ತಿದ್ದುಪಡಿ

ಉಲ್ಲೇಖ: ಸುತ್ತೋಲೆ ಸಂ:ಬೆಂಜಮಂ/ಅ/ಪ್ರಅ/16165/2015-16 ದಿನಾಂಕ: 3.3.2016

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸುತ್ತೋಲೆ ಸಂ. 16165 ದಿನಾಂಕ: 3.3.2016ಯಲ್ಲಿ ಇರುವ ಮಾಹಿತಿಯನ್ನು ಈ ಕೆಳಕಂಡಂತೆ ತಿದ್ದಲಾಗಿರುತ್ತದೆ.

| ಕ್ರ.ಸಂ. | ಕಟ್ಟಡಗಳ ವಿವರ | ಪರಿಷ್ಕೃತ ದಾಮಾಷ ಶುಲ್ಕ ದರಗಳ ವಿವರ (ಒಟ್ಟು ಕಟ್ಟಡದ ನಿರ್ಮಾಣ ಪ್ರದೇಶಕ್ಕೆ) |
|---|---|---|
| 1. | ವಸತಿ ಗೃಹ | ರೂ.250/- ಪ್ರತಿ ಚದರ ಮೀಟರ್ |
| 2. | ಬಹುಮಹಡಿ ವಸತಿ ಗೃಹಸಮುಚ್ಚಯ ಕಟ್ಟಡಗಳು, ವಿಲಾಸಿ ಬಂಗಲೆಗಳು, ವಿಲ್ಲಾ | ರೂ.400/- ಪ್ರತಿ ಚದರ ಮೀಟರ್ |
| 3. | ಎಲ್ಲಾ ವಿಧದ ಗೃಹೇತರ / ವಾಣಿಜ್ಯ ಕಟ್ಟಡಗಳು | ರೂ.600/- ಪ್ರತಿ ಚದರ ಮೀಟರ್ |

ಸುತ್ತೋಲೆಯಲ್ಲಿ ಇರುವ ಉಳಿದ ಎಲ್ಲಾ ಮಾಹಿತಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

4/3/16.
ಅಧ್ಯಕ್ಷರು
ಬೆಂಗಳೂರು ಜಲಮಂಡಳಿ

**ಪ್ರತಿಯನ್ನು:**

1. ಪ್ರಧಾನ ಮುಖ್ಯ ಅಭಿಯಂತರರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಮುಖ್ಯ ಅಭಿಯಂತರರು (ನಿ) ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
3. ಮು.ಆ.ಅ-ಕಾ ಮತ್ತು ಆ.ಸ ಮತ್ತು ಮು.ಲೆ.ಅ. ರವರ ಮಾಹಿತಿಗಾಗಿ.
4. ಅಮುಅ(ನಿ)-1, ಅಮುಅ(ನಿ)-2, ಅಮುಅ(ನಿ)-3, ಅಮುಅ(ಕಂದಾಯ) ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
5. ಕಾನಿಅ(ಆರ್.ಬಿ.ಸಿ) ಮತ್ತು ನಿರ್ವಹಣಾ ವಲಯದ ಎಲ್ಲಾ ಕಾನಿಅ ಮತ್ತು ಸಕಾನಿಅ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
6. ಸಾ.ಸಂ.ಅ, ಕಾನೂನು ಅಧಿಕಾರಿ, ಸ.ನಿ(ಲೆಕ್ಕಗಳು) ರವರ ಮಾಹಿತಿಗಾಗಿ.